ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ. ಇಡಿ/ಕೆಇಎ/ವಸತಿ ಶಾಲೆ ಪ್ರವೇಶ/2023 ದಿನಾಂಕ 30.06.2023

**ಪ್ರಕಟಣೆ**

ಸರ್ಕಾರದ ಆದೇಶಗಳನ್ವಯ ಯಾವುದೇ ವಿಶೇಷ ವರ್ಗಗದ ಸ್ಥಾನ ಪರಿಶಿಷ್ಟ ಜಾತಿ, ಆಶ್ರಮ ಶಾಲೆ ಬಾಲಕ/ಬಾಲಕಿ ಸ್ಥಾನ ಲಭ್ಯವಿಲ್ಲದಿದ್ದಲ್ಲಿ ಇತರೆ ವಿಶೇಷ ವರ್ಗದ (ಅಲೆಮಾರಿ, ಮಾಜಿ ಸೈನಿಕ/ ವಿಶೇಷ ದುರ್ಬಲ ವರ್ಗದ) ಪರಿಶಿಷ್ಟ ಜಾತಿಯ ಬಾಲಕರಿಗೆ/ಬಾಲಕಿಯರಿಗೆ ಅವಕಾಶ ಕಲ್ಪಿಸಲಾಗಿದೆ.

ಮೇಲಿನಂತೆ ಅವಕಾಶ ಕಲ್ಪಿಸಿದ ನಂತರ ವಿಶೇಷ ವರ್ಗದ ಮೀಸಲಾತಿ ಅಡಿಯಲ್ಲಿ ಸ್ಥಾನಗಳು ಖಾಲಿ ಉಳಿದಿದ್ದು "ವಿಶೇಷ ವರ್ಗದ" ಅಭ್ಯರ್ಥಿಗಳು ಎಂದರೆ ಅಲೆಮಾರಿ, ಆಶ್ರಮ ಶಾಲೆ, ಅನಾಥ ಮಕ್ಕಳು, ದೇವದಾಸಿ ಮಕ್ಕಳು ಇತರೆ ಸಾಮಾಜಿಕ ದುರ್ಬಲ ವರ್ಗಕ್ಕೆ ಸೇರಿದವರಾಗಿರುವ ಕಾರಣ ವಿಶೇಷ ವರ್ಗದಲ್ಲಿಯೆ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳಿಗೆ ಸೀಟುಗಳನ್ನು ಹಂಚಿಕೆ ಮಾಡಲಾಗಿದೆ. ಈ ಸೀಟುಗಳನ್ನು GMMA (Un reserved Male Special Category) ಮತ್ತು GMFA (Un reserved Female Special Category) ಎಂದು ಹೇಳಲಾಗಿದೆ. ನಂತರ ಅದೇ ರೀತಿ ಯಾವುದೇ "ವಿಶೇಷ ವರ್ಗದ" ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ GMM (Un reserved male) ಮತ್ತು GMF (Un reserved Female) ವಿದ್ಯಾರ್ಥಿಗೆ ಹಂಚಿಕೆ ಮಾಡಲಾಗಿದೆ.

3ನೇ ಸುತ್ತಿನ ಆಯ್ಕೆ ಪ್ರಕಟವಾಗಿದ್ದು ಆಯ್ಕೆ ಪಟ್ಟಿಯ Claimed Category ಯನ್ನು ಮಾತ್ರ ಪರಿಗಣಿಸಿದ್ದು, ಅಭ್ಯರ್ಥಿಗಳು ಸೂಕ್ತ ದಾಖಲೆಗಳನ್ನು ಸಲ್ಲಿಸಿದಲ್ಲಿ ಮಾತ್ರ ಪ್ರವೇಶಾತಿ ನೀಡುವುದು. ಒಂದು ವೇಳೆ Allotted Category GMF (Un reserved Female) ಮತ್ತು GMM (Un reserved Male) ಆಗಿದ್ದಲ್ಲಿ, ಅಭ್ಯರ್ಥಿಗಳು Claimed Category ಅಡಿಯಲ್ಲಿ ನಮೂದಿಸಿರುವ ಜಾತಿ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ಸೂಕ್ತ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಶಾಲೆಯ ಪ್ರಾಂಶುಪಾಲರು ಅವುಗಳನ್ನು ಪರಿಶೀಲಿಸಿ, ಸರ್ಕಾರದ ಆದೇಶದನ್ವಯ ಇದ್ದಲ್ಲಿ ಮಾತ್ರ ಪ್ರವೇಶಾತಿ ನೀಡುವುದು ಇಲ್ಲದಿದ್ದಲ್ಲಿ ದಾಖಲಾತಿ ತಿರಸ್ಕರಿಸುವುದು (Not Reported ಎಂದು Update ಮಾಡುವುದು). ಸದರಿ ಕ್ರಮವು ಎಸಿ, ಎಸ್.ಟಿ ಮತ್ತು ಓಬಿಸಿ ವಸತಿ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ ಹೊರತು 28 ಸಾಮಾನ್ಯ ವರ್ಗದ ವಸತಿ ಶಾಲೆಗಳಿಗೆ ಅನ್ವಯಿಸುವುದಿಲ್ಲ.

3ನೇ ಸುತ್ತಿನ ಸೀಟು ಹಂಚಿಕೆಯ ಪ್ರವೇಶಾತಿಗಾಗಿ ಕೊನೆಯ ದಿನಾಂಕವನ್ನು 01.07.2023ರ ಸಂಜೆಯವರೆಗೆ ವಿಸ್ತರಿಸಿದೆ. ವಸತಿ ಶಾಲೆಗಳ ಪ್ರಾಂಶುಪಾಲರಿಗೆ ಪ್ರವೇಶಾತಿಗಳನ್ನು ತಪ್ಪದೆ ಪೋರ್ಟಲ್‌ನಲ್ಲಿ ದಾಖಲಿಸಲು ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in